ಪ್ರಮಾಣ ವಚನ ಬೋಧಿಸಿದ ದಿನಾಂಕಃ **25.03.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎ.ಕೆ ವಕೀಲರಿಂದ**

ಈ ಕೇಸನ್ನು ವಜೀರ್ ರವರು ವರಲಕ್ಷ್ಮೀಯವರ ವಿರುದ್ಧ ಹಾಕಿದ್ದಾರೆ. ವರಲಕ್ಷ್ಮೀಯವರು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ವಯಸ್ಸು ಆಗಿರುವ ಕಾರಣ ಆರೋಗ್ಯ ಸರಿ ಇಲ್ಲ. ಈ ರೀತಿ 5ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲ ಹಾಗೂ ಓಡಾಡಲು ಆಗುವುದಿಲ್ಲ ಎಂದು ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ನನಗೆ 5ನೇ ಪ್ರತಿವಾದಿಯು ಸಂಬಂಧಿಕರಲ್ಲ. 5ನೇ ಪ್ರತಿವಾದಯು ಆಂಧ್ರಪ್ರದೇಶದ ವಿಶಾಖಪಟ್ಟಣದವರು ಎಂದರೆ ಸರಿ. ಅವರು ಈಗಲೂ ಕೂಡ ವಿಶಾಖಪಟ್ಟಣದಲ್ಲಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಈಗ ಎಲ್ಲಿ ವಾಸಮಾಡುತ್ತಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಅವರ ವಿಳಾಸವಿರುವ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿ.

ದಾವಾ ಆಸ್ತಿಯ ಸರ್ವೆ ನಂ.66/6 ಅದರಲ್ಲಿ 1 ಎಕರೆ 10 ಗುಂಟೆ ಇದೆ. ಅದರ ಚಕ್ಕುಬಂಧಿ ಗೊತ್ತಿಲ್ಲ. 5ನೇ ಪ್ರತಿವಾದಿಗೆ ಕೂಗೇನಹಳ್ಳಿ ಗ್ರಾಮದಲ್ಲಿ 2 ವರೆ ಎಕರೆ ಜಮೀನು ಇದೆ. ದಾವಾ ಆಸ್ತಿಯನ್ನು ಸೇರಿಸಿ ಅವರಿಗೆ 2 ವರೆ ಎಕರೆ ಜಮೀನು ಇದೆ. ವಾದಿಯು 5ನೇ ಪ್ರತಿವಾದಿಯ ವಿರುದ್ಧ ಯಾವ ಪರಿಹಾರವನ್ನು ಕೇಳಿ ಈ ದಾವೆಯನ್ನು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಆಲಮ್‌ಬಿರವರಿಗೆ ಸೇರಿದ ಆಸ್ತಿಯಾಗಿತ್ತು. ಸದರಿ ಆಲಮ್‌ಬಿ ರವರಿಗೆ ಹೇಗೆ ಬಂತು ಎಂದರೆ ಗೊತ್ತಿಲ್ಲ . ನಾನು ಆಲಮ್‌ಬಿರವರನ್ನು ನೋಡಿಲ್ಲ. ಈಗ ಅವರು ಜೀವಂತವಿದ್ದಾರಾ? ಎಂದರೆ ಗೊತ್ತಿಲ್ಲ. ಆಲಮ್‌ಬಿರವರ ಗಂಡನ ಹೆಸರು ಗೊತ್ತಿಲ್ಲ ಹಾಗೂ ಅವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದರೆ ಗೊತ್ತಿಲ್ಲ. ಈ ಕೇಸಿನ ವಾದಿಯರು ಆಲಮ್‌ಬಿರವರ ಮಗ ಮತ್ತು ಸೊಸೆ

ಎಂದರೆ ಸರಿ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ವಾದಿಯು ಹುಟ್ಟಿದಾಗಿನಿಂದ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದು, **1993**ರಲ್ಲಿ ಅವರ ತಾಯಿಯ ಹೆಸರಿಗೆ ಸರ್ಕಾರದಿಂದ ಮಂಜೂರು ಮಾಡಿಕೊಂಡಿದ್ದಾರೆ ಎಂದರೆ ಸರಿ. ಅದರಂತೆ ವಾದಿಯ ತಾಯಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಆಲಮ್ ಬಿರವರ ಜೀವಿತ ಕಾಲದಲ್ಲಿ ನಮಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ.

ಆಲಮ್ ಬಿರವರಿಗೆ ವಜೀಸ್ ಸಾಬ್, ಚೋಟಾ ಸಾಬ್, ಬಾಷಾ ಸಾಬ್ ಮತ್ತು ಶಫೀಉಲ್ಲಾ ಎಂಬ ಗಂಡು ಮಕ್ಕಳು ಹಾಗೂ ಬಿಬಿಜಾನ್ ಎಂಬ ಹೆಣ್ಣು ಮಗಳು ಇದ್ದರು ಎಂದರೆ ಸರಿ. ಉಳಿದ ಮಕ್ಕಳನ್ನು ಬಿಟ್ಟು ನಾನು ಕೇವಲ ಶಫೀ ಉಲ್ಲಾರವರ ಕಡೆಯಿಂದ ಕ್ರಯಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೂರು ಜನರಿಗೆ ಕ್ರಯವಾದ ನಂತರ ನಾವು ಮಾಡಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನಾವು ಸತ್ಯಪ್ರಕಾಶ್ ರವರಿಂದ ಖರೀದಿಸಿರುತ್ತೇವೆ. **3**ನೇ ಪ್ರತಿವಾದಿಯು **4**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. ವಾದಿಯು **3** ಅಥವಾ **4**ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯು **3**ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆಲಮ್‌ಬಿರವರ ಮಕ್ಕಳ ನಡುವೆ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ವಿಭಾಗದಲ್ಲಿ ವಾದಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆಲಮ್ ಬಿರವರ ಎಲ್ಲಾ ಮಕ್ಕಳು ಸೇರಿ **3**ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ವಾಟಿ ಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.